**C.C. No. 28/2015**
**ಪಿ.ಡಬ್ಲ್ಯು-01**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ದಂಡಾಧಿಕಾರಿಗಳು,**
**ಹೆಗ್ಗಡದೇವನಕೋಟೆ.**

**ಸಿ.ಸಿ. 28/2015**

| | | |
|---|---|---|
| ಸಾಕ್ಷಿದಾರರ ಹೆಸರು | : | ಸಹನ ಕೆ.ಜಿ. |
| ಗಂಡನ ಹೆಸರು | : | ಮಹೇಶ |
| ವಯಸ್ಸು | : | 34 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸಸ್ಥಳ | : | ತೆರೆಣಿಮುಂಟಿ ಗ್ರಾಮ, ಹೆಚ್.ಡಿ. ಕೋಟೆ ತಾ. |

**ದಂಡ ಪ್ರಕ್ರಿಯಾ ಸಂಹಿತೆ ಕಲಂ 244 ರಡಿಯಲ್ಲಿ ಪಿರ್ಯಾದುದಾರರ ಪರ ಸಾಕ್ಷ್ಯ ಸಾಕ್ಷಿಯನ್ನು ದಿನಾಂಕಃ 22.11.2022 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಪಿರ್ಯಾದುದಾರರ ಪರ ಶ್ರೀ. ಪಿ.ಎಸ್. ವಕೀಲರಿಂದಃ**

ನಾನು ಯರಹಳ್ಳಿ ಹ್ಯಾಂಡ್ ಪೋಸ್ಟ್ ನಲ್ಲಿ ಜನವರಿ 2013 ರಿಂದ ಏಪ್ರಿಲ್ 2014 ರವರೆಗೆ ವಾಸ ಮಾಡುತ್ತಿದ್ದೆ. ಸದರಿ ಮನೆಯಲ್ಲಿ ನಾನು, ನನ್ನ ಗಂಡ ಮತ್ತು ನನ್ನ ಮಗು ವಾಸಿಸುತ್ತಿದ್ದೆವು. ಸದರಿ ಮನೆ ಬಾಡಿಗೆ ಮನೆಯಾಗಿದ್ದು, ಆ ಮನೆ ಹರೀಶ್ ಎಂಬುವವರಿಗೆ ಸೇರಿತ್ತು. ನನ್ನ ಗಂಡ ದಿನಾಂಕಃ 04.01.2014 ರಂದು ಮೃತಪಟ್ಟಿರುತ್ತಾರೆ. ನನ್ನ ಗಂಡ ಮೃತಪಡುವ ಸಮಯದಲ್ಲಿ ನನ್ನ ಮಗು ನರ್ಸರಿಗೆ ಹೋಗುತ್ತಿತ್ತು. ನನ್ನ ಗಂಡ ಚಾಲಕರಾಗಿದ್ದರು. ನನ್ನ ಗಂಡ ಮೃತಪಟ್ಟ ನಂತರ ನಾನು ಅಲ್ಲಿಯೇ ವಾಸ ಮಾಡುತ್ತಿದ್ದೆ. ದಿನಾಂಕಃ 10.03.2014 ರಂದು ನಾನು ನನ್ನ ಮನೆಯಲ್ಲಿ ಒಬ್ಬಳೇ ಇದ್ದೆ. ಆಗ ನನ್ನ ಮಾವ ಮುದ್ದಪ್ಪ, ನನ್ನ ಭಾವ ಸ್ವಾಮಿ, ನನ್ನ ಮೈದ ಸುರೇಶ, ಇನ್ನೊಬ್ಬ ಮೈದ ರವಿಕುಮಾರ್ ಮತ್ತು ಆದರ್ಶ ಎಂಬುವವರು ಏಕಾ-ಏಕಿ ಬಂದು ನಮ್ಮ ಮನೆಯ ಬಾಗಿಲನ್ನು ಒದ್ದು ಒಳಗಡೆ ಬಂದು ಮನೆಯ ಒಳಗಡೆ ಇದ್ದ ಕುರ್ಚಿಗಳನ್ನು ಒದ್ದು, ಕೀಗಳನ್ನು ಕೇಳಿರುತ್ತಾರೆ. ನಾನು ಅದಕ್ಕೆ ಕೊಡುವುದಿಲ್ಲ ಎಂದು ಹೇಳಿರುತ್ತೇನೆ.

**ಈ ಹಂತದಲ್ಲಿ ಪಿರ್ಯಾದುದಾರರ ಪರ ವಕೀಲರು ಮುಂದಿನ ಮುಖ್ಯ ವಿಚಾರಣೆಗಾಗಿ ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**